<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>

<u>ದಕ್ಷಿಣ ಕನ್ನಡ, ಮಂಗಳೂರು</u>

**<u>ಸ್ಪೆಷಲ್ ಕೇಸ್ ನಂಬ್ 11/2022</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸೂರಜ್ ರೆಬೆಲೊ | ಚಾಸಾ-5 |
| ತಂದೆಯ ಹೆಸರು | : | ಸಿ ಜೆ ರೆಬೆಲೊ | ಫ್ರಾಸಾ-3 |
| ಪ್ರಾಯ | : | 55 ವರ್ಷ | ದಿನಾಂಕಃ 23.10.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಖಾಸಗಿ ಉದ್ಯೋಗ | |
| ವಾಸಸ್ಥಳ | : | ಬಿಜೈ , ಮಂಗಳೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>

1. ನನಗೆ ಸೇರಿದ ಕಟ್ಟಡವು ಮಂಗಳೂರು ಬಿಜೈ ಚರ್ಚ ನ ಹಿಂಬಗದಲ್ಲಿ ಇರುತ್ತದೆ. ಅದರಲ್ಲಿ ರೂಮ್ ವ್ಯವಸ್ಥೆ ಇದ್ದು ಅವುಗಳನ್ನು ಬಾಡಿಗೆಗೆ ಕೊಡುತ್ತೇನೆ.

2. ನ್ಯಾಯಾಲಯದಲ್ಲಿ ಕಾಣಿಸುವ ಆರೋಪಿಯ ಪರಿಚಯ ಇರುತ್ತದೆ. ಆರೋಪಿ ನಮ್ಮ ಕಟ್ಟಡದ ರೂಮ್ ನಂಬರ 15 ರಲ್ಲಿ ಬಾಡಿಗೆ ಇದ್ದನು. ಈ ಘಟನೆಗೂ ಪೂರ್ವ ಒಂದುೂವರೆ ವರ್ಷದಿಂದ ಆತನನ್ನು ಪೋಲಿಸರು ದಸ್ತಗಿರಿ ಮಾಡುವ ವರೆಗೂ ಇದ್ದನು. ದಿ. 12.06.2021 ರಂದು ಆರೋಪಿಯು ಬೆಳಗ್ಗೆ 9.30 ಗಂಟೆಗೆ ಪೋಲಿಸರ ಜೊತೆ ಸದರಿ ನಮ್ಮ ಕಟ್ಟಡಕ್ಕೆ ಬಂದು ತಾನು ಇರುವ ರೂಮ್ ಅನ್ನು ಪೋಲಿಸರಿಗೆ ತೋರಿಸಿ ತನ್ನ ಹತ್ತಿರ ಇದ್ದ ಕೀಲಿಯಿಂದ ರೂಮಿನ ಬಾಗಿಲನ್ನು ತೆಗೆದಿರುತ್ತಾನೆ. ರೂಮಿನ ಒಳಗೆ ಹೋಗಿ ಆರೋಪಿಯು ಒಂದು ಪೋಸ್ಟಲ್ ಕವರ್ ಅನ್ನು ತೋರಿಸಿ ಅದರಲ್ಲಿ ಮಾದಕ ವಸ್ತು ಬರುತ್ತಿತ್ತು ಎಂದು ಹೇಳಿರುತ್ತಾನೆ. ನಂತರ ಪೋಲಿಸರು ಸದರಿ ಕವರ್ ಅನ್ನು ಇನ್ನೊಂದು ಸಾದಾ ಕವರ್ ಅಲ್ಲಿ ಹಾಕಿ ಅದನ್ನು ಪ್ಯಾಕ್ ಮತ್ತು ಸೀಲ್ ಮಾಡಿ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಸಾದಾ ಕವರ್ ನ ಮೇಲೆ ನಾನು ಸಹಿ ಮಾಡಿರುತ್ತೇನೆ.

3. ( ಸದರಿ ಸೀಲ್ ಮತ್ತು ಪ್ಯಾಕ್ ಮಾಡಿದ ಸಾದಾ ಕವರ್ ಅನ್ನು ತೆರೆದ ನ್ಯಾಯಾಲಯದಲ್ಲಿ

ತೆಗೆಯಲಾಗಿರುತ್ತದೆ ಮತ್ತು ಅದರಲ್ಲಿ ತೆರೆದ ಒಂದು ಪೋಸ್ಟಲ್ ಕವರ್ ಇರುತ್ತದೆ.) ಸದರಿ ಪೋಸ್ಟಲ್ ಕವರ್ ಅನ್ನು ನಿಶಾನೆ ಪಿ- 8 ಎಂದು ಗುರುತಿಸಲಾಯಿತು. ಸಾದಾ ಕವರ್ ಅನ್ನು ನಿಶಾನೆ ಪಿ–9 ಎಂದು ಗುರುತಿಸಲಾಯಿತು. ನಿಶಾನೆ ಪಿ–9 ಕ್ಕೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಚೀಟಿಯನ್ನು ನಿಶಾನೆ ಪಿ–10 ಎಂ ದು , ಸಾಕ್ಷಿಯ ಸಹಿಯನ್ನು ನಿಶಾನೆ 10–ಎ ಎಂದು ಗುರುತಿಸಲಾಯಿತು.

4. ಸದರಿ ಪೋಸ್ಟಲ್ ಕವರ್ ಅನ್ನು ಇನ್ನೊಂದು ಸಾದಾ ಕವರಿನಲ್ಲಿ ಹಾಕಿ ಸೀಲ್ ಮತ್ತು ಪ್ಯಾಕ ಮಾಡಿದ ಬಗ್ಗೆ ಮಹಜರ ಬೆಳಗ್ಗೆ 9.30 ಗಂಟೆಯಿಂದ 10.30 ಗಂಟೆ ವರೆಗೆ ಮಾಡಲಾಗಿರುತ್ತದೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ–11 ಎಂದು , ಸಾಕ್ಷಿಯ ಸಹಿಯನ್ನು ನಿಶಾನೆ ಪಿ–11 ಎ ಎಂದು ಗುರತಿಸಲಾಯಿತು. . ನನ್ನ ಜೊತೆಗೆ ಸದರಿ ಮಹಜರಿಗೆ ನಮ್ಮ ವಾಚ್‌ಮೆನ್ ಆದ ಚಾಸಾ–6 ರವರು ಕೂಡ ಸಹಿ ಮಾಡಿರುತ್ತಾರೆ.

5. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆನ್ನು ತೆಗೆದುಕೊಡಿರುತ್ತಾರೆ.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ವಿ ಆರ್ ಎ ., ವಕೀಲರಿಂದಃ</u>

6. ಸದರಿ ಪೋಸ್ಟಲ್ ಕವರಿನಲ್ಲಿ ಏನು ಇರಲಿಲ್ಲ ಮತ್ತು ಅದು ಖಾಲಿ ಕವರ್ ಆಗಿರುತ್ತದೆ. 1 ನೇ ಆರೋಪಿ ಸದರಿ ಪೋಸ್ಟಲ್ ಕವರಿನಲ್ಲಿ ಮಾದಕ ವಸ್ತು ಬಂದಿರುತ್ತದೆ ಎಂದು ಹೇಳಿರುವುದಿಲ್ಲ ಮತ್ತು ನಾನು ಪೋಲಿಸರ ಮಾತು ಕೇಳಿ ಆ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪೋಸ್ಟಲ್ ಕವರನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಮತ್ತು ನಾನು ಅದಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.